ಮಾಡುವುದಕ್ಕೆ ನಾಳೆ ಬೆಳಿಗ್ಗೆ ನಾನು ಹೈದರಾಬಾದಿಗೆ ಹೋಗಿ ನಾಳೆ ಸಂಜೆ ವಾಪಸ್ಸು ಬರುತ್ತಿದ್ದೇನೆ. ಅಲ್ಲಿ ನಾವು ಏನು ಅವರ ಜೊತೆಯಲ್ಲಿ ಸಮಾಲೋಚನೆ ಮಾಡುತ್ತೇವೆ, ಆ ಸಮಾಲೋಚನೆಗಳ ಆಧಾರದ ಮೇಲೆ ಸದನದ ಸಮಿತಿ ಏನು ತೀರ್ಮಾನ ಮಾಡಿದೆ,ಅದರ ಬಗ್ಗೆ ನಾಡಿದ್ದು ನಾನು ಒಂದು ಹೇಳಿಕೆ ಕೊಡುತ್ತೇನೆ.

(ಇ) ರಾಜಾಜಿನಗರದಲ್ಲಿನ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ

ಶ್ರೀ ಕೆ. ಲಕ್ಕಣ್ಣ : ನಾನು ನೀರಿನ ಸಮಸ್ಯೆ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಮೂರು ಸಾರಿ ಕೇಳಿದ್ದೇನೆ, ನನಗೆ ಅವಕಾಶ ಕೊಟ್ಟಿಲ್ಲ.

ಅಧ್ಯಕ್ಷರು : ಮೊನ್ನೆ ತಾವು ಪ್ರಸ್ತಾಪ ಮಾಡಿದ್ದೀರಿ. ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದು ರೆಕಾರ್ಡ್‌ನಲ್ಲಿದೆ. ಪುನಃ ಅದನ್ನೇ ಎತ್ತುತ್ತೇವೆಂದರೆ ಏನು ಅರ್ಥ? ತಾವು ಕುಳಿತುಕೊಳ್ಳಿ.

ಶ್ರೀ ಕೆ. ಲಕ್ಕಣ್ಣ : ಜಲ ಮಂಡಲಿಯವರು ಶಾಸಕರ ಜೊತೆ, ಸರ್ಕಾರದ ಜೊತೆ ಸಮಾಲೋಚನೆ ಮಾಡಿ ವ್ಯವಸ್ಥೆ ಮಾಡಬೇಕು. ರಾಜಾಜಿನಗರದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಬಹಳ ಅವ್ಯವಸ್ಥೆಯಾಗಿದೆ. ವಾರದಲ್ಲಿ 4 ದಿನ ನೀರು ಬರುವುದಿಲ್ಲ.

ಅಧ್ಯಕ್ಷರು : ತಾವು ದಯವಿಟ್ಟು ಕುಳಿತುಕೊಳ್ಳಬೇಕು. ತಮ್ಮ ಸೂಚನೆಯನ್ನು ನಾನು ಸಂಬಂಧಪಟ್ಟ ಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದೇನೆ. ಮೊನ್ನೆ ಕೂಡ ಪ್ರಸ್ತಾಪ ಮಾಡಿದ್ದೀರಿ. ಈ ಹಿನ್ನೆಲೆಯಲ್ಲಿ ಪುನಃ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಪ್ರತಿನಿತ್ಯ ಅದೇ ಪ್ರಸ್ತಾವನೆ ಮಾಡುತ್ತೇವೆಂದರೆ ಹೇಗೆ ಆಗಬೇಕು?

ಶ್ರೀ ಕೆ. ಲಕ್ಕಣ್ಣ : ಇದು ಬಹಳ ಪ್ರಾಮುಖ್ಯವಾದುದು ಇದೆ. ನಾನು ಆ ಬಗ್ಗೆ ಮಾತನಾಡಲಿಲ್ಲ.

ಅಧ್ಯಕ್ಷರು : ತಾವು ಮಾತನಾಡಿದ್ದು ರೆಕಾರ್ಡ್‌ನಲ್ಲಿದೆ. ಮಂತ್ರಿಗಳಿಗೆ ಹೇಳಿ ಕಳುಹಿಸಿದ್ದೇನೆ.

ಶ್ರೀ ಕೆ. ಲಕ್ಕಣ್ಣ : ಮಂತ್ರಿಗಳಿಂದ ಹೇಳಿಕೆ ಕೊಡಿಸಿ.

ಅಧ್ಯಕ್ಷರು : ಹೇಳಿಕೆ ಕೊಡಿಸುತ್ತೇನೆ.

2. <u>ಗಮನ ಸೆಳೆಯುವ ಸೂಚನೆಗಳು</u>

ವಿಷಯ : ತೀರ್ಥಹಳ್ಳಿ ಮತ್ತು ಸುತ್ತ ಮುತ್ತಲಿನ ತಾಲ್ಲೂಕುಗಳಲ್ಲಿ ಹಬ್ಬಿರುವ ಮಂಗನ ಕಾಯಿಲೆಯಿಂದ ಆಗಿರುವ ಸಾವು ಮತ್ತು ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳ ಬಗ್ಗೆ-

ಶ್ರೀ ಡಿ.ಬಿ. ಚಂದ್ರೇಗೌಡ(ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೇ, ತೀರ್ಥಹಳ್ಳಿ ಮತ್ತು ಸುತ್ತಮುತ್ತಲಿನ ತಾಲ್ಲೂಕುಗಳಲ್ಲಿ ಹಬ್ಬಿರುವ ಮಂಗನ ಕಾಯಿಲೆಯಿಂದ ಆಗಿರುವ

ಸಾವು ಮತ್ತು ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ.

ಕ್ಯಾಸನೂರು ಅರಣ್ಯ ಖಾಯಿಲೆ (ಮಂಗನ ಖಾಯಿಲೆ) 1956ರಲ್ಲಿ ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕು ಕ್ಯಾಸನೂರಿನಲ್ಲಿ ಮೊಟ್ಟಮೊದಲು ಕಾಣಿಸಿಕೊಂಡಿದ್ದು. ಅಲ್ಲಿಂದ ಶಿವಮೊಗ್ಗ, ಸಾಗರ, ಹೊಸನಗರ, ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ಹಾಗೂ ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೂ ಹರಡುತ್ತಾ ಪ್ರತಿ ವರ್ಷವೂ ಈ ಕಾಯಿಲೆಯಿಂದ ಅನೇಕ ಜನರು ತುತ್ತಾಗಿ ಮರಣಗಳು ಸಂಭವಿಸಿದೆ. ಕಳೆದ ಮೂರು ವರ್ಷಗಳಲ್ಲಿ ಈ ಕಾಯಿಲೆಯ ಪರಿಸ್ಥಿತಿಯು ಈ ಕೆಳಕಂಡಂತಿದೆ.

ವರ್ಷ	ಜಿಲ್ಲೆ	ತಾಲ್ಲೂಕು	ರೋಗ ತಗಲಿದವರ ಸಂಖ್ಯೆ	ಕೆ.ಎಫ್.ಡಿ ದೃಢಪಟ್ಟ ರೋಗಿಗಳ ಸಂಖ್ಯೆ	ಮರಣ ಹೊಂದಿದ ಸಂಖ್ಯೆ	ಕೆ.ಎಫ್.ಡಿ. ಎಂದು ದೃಢಪಟ್ಟ ಮರಣದ ಸಂಖ್ಯೆ
1990	ಶಿವಮೊಗ್ಗ	ತೀರ್ಥಹಳ್ಳಿ	1033	321	12	8
		ಹೊಸನಗರ	72	20	–	–
		ಶಿವಮೊಗ್ಗ	18	8	1	1
	ಉತ್ತರಕನ್ನಡ	ಹೊನ್ನಾವರ	166	58	17	–
		ಕುಮುಟ	11	3	–	–
		ಭಟ್ಕಳ	7	2	1	1
		ಅಂಕೋಲ	2	–	–	–
		ಒಟ್ಟು	1809	412	30	10
1991	ಶಿವಮೊಗ್ಗ	ತೀರ್ಥಹಳ್ಳಿ	562	83	1	–
		ಹೊಸನಗರ	111	13	1	–
		ಶಿವಮೊಗ್ಗ	4	2	–	–
		ಸೊರಬ	2	–	–	–
	ಉತ್ತರಕನ್ನಡ	ಭಟ್ಕಳ	117	7	6	4
		ಹೊನ್ನಾವರ	143	29	6	4
		ಸೂಪಾ	20	3	–	–
		ಎಲ್ಲಾಪುರ	5	5	2	1
	ದಕ್ಷಿಣ ಕನ್ನಡ	ಬೆಳ್ತಂಗಡಿ	3	–	–	–
		ಒಟ್ಟು	967	142	16	9